# ಮರಳಿ ಗರ್ಜಿಸಿದ 'ಟೈಗರ್'

'ಟೈಗರ್' ಮರಳಿ ಗರ್ಜಿಸಿದ್ದಾನೆ! ಕಳೆದ ವಾರ ಈಸ್ಟ್‌ಲೇಕ್ ಗಾಲ್ಫ್ ಕ್ಲಬ್ ಪ್ರಶಸ್ತಿ ಗೆದ್ದ ಬಳಿಕ ಟೈಗರ್ ವುಡ್ಸ್ ಅಭಿಮಾನಿಗಳು ಖುಷಿಯಿಂದ ಕುಪ್ಪಳಿಸುತ್ತಿದ್ದಾರೆ. ಅದಕ್ಕೂ ಕಾರಣವಿದೆ. 2008ರಿಂದ ಈತ ಯಾವ ಪ್ರಮುಖ ವಿಶ್ವಮಟ್ಟದ ಗಾಲ್ಫ್ ಟೂರ್ನಿಯನ್ನೂ ಗೆದ್ದಿಲ್ಲ; 2013ರಿಂದ ಯಾವ ಗಾಲ್ಫ್ ಟೂರ್ ಕೂಡಾ ಗೆದ್ದಿಲ್ಲ. ಎಂಟು ವರ್ಷಗಳ ಬಳಿಕ ಗೆದ್ದಿರುವ ಈ ಪ್ರಶಸ್ತಿ, ಟೈಗರ್ ವುಡ್ಸ್‌ನ ಕಥೆ ಮುಗಿದೇ ಹೋಯಿತು ಎಂದುಕೊಂಡಿದ್ದವರಿಗೆ ಅಚ್ಚರಿ ಹುಟ್ಟಿಸಿದೆ. 10 ದಿನಗಳ ಹಿಂದೆ ವಿಶ್ವ ಗಾಲ್ಫ್ ರ‍್ಯಾಂಕಿಂಗ್‌ನಲ್ಲಿ 1999ನೇ ಸ್ಥಾನದಲ್ಲಿದ್ದ ಟೈಗರ್ ಈಗ 13ನೇ ರ‍್ಯಾಂಕ್‌ಗೆ ಜಿಗಿದಿದ್ದಾನೆ. ಇದು ನಿಜಕ್ಕೂ ಕ್ರೀಡಾಲೋಕದ ಮಹಾಜಿಗಿತ.

ಈತನ ನಿಜ ನಾಮಧೇಯ ಎಲ್ಡ್ರಿಕ್ ಟಾಂಟ್ ವುಡ್ಸ್. ಆದರೆ ಜಗತ್ತಿನ ಕ್ರೀಡಾಲೋಕ ಈತನನ್ನು ಟೈಗರ್ ವುಡ್ಸ್ ಎಂದೇ ಕರೆಯುತ್ತಿದೆ. ಸತತವಾಗಿ ಹಲವು ವರ್ಷಗಳ ಕಾಲ ವಿಶ್ವದ ಅತ್ಯಧಿಕ ಸಂಭಾವನೆ ಪಡೆಯುವ ಕ್ರೀಡಾಳು ಎಂಬ ಗೌರವ ಹೊಂದಿದ್ದ ಟೈಗರ್ ವುಡ್ಸ್, ನಿಸ್ಸಂಶಯವಾಗಿಯೂ 21ನೇ ಶತಮಾನದ ಅತ್ಯಂತ ಜನಪ್ರಿಯ ಅಥ್ಲೀಟ್. ಒಂದರ ಹಿಂದೆ ಒಂದರಂತೆ ವಿಶ್ವದ ಪ್ರತಿಷ್ಠಿತ ಗಾಲ್ಫ್ ಪ್ರಶಸ್ತಿಗಳನ್ನು ಗೆಲ್ಲುತ್ತಾ ಸಾಗಿದ ಟೈಗರ್ ವುಡ್ಸ್, 2008ರಿಂದ ವೈಯಕ್ತಿಕ ಜೀವನದಲ್ಲಿ ಹೆಜ್ಜೆ ತಪ್ಪತೊಡಗಿದ. ವೈಭವೋಪೇತ ಜೀವನಶೈಲಿಯನ್ನು ರೂಢಿಸಿಕೊಂಡ. ಎಕರೆಗಟ್ಟಲೆ ವಿಸ್ತಾರದ ಐಷಾರಾಮಿ ಬಂಗಲೆಗಳು, ದುಬಾರಿ ಯಾಚ್‌ಗಳು, ಖಾಸಗಿ ಜೆಟ್ ವಿಮಾನಗಳು, ಸ್ವತಃ ವಿನ್ಯಾಸ ರೂಪಿಸಿ ಆರ್ಡರ್ ಕೊಟ್ಟು ನಿರ್ಮಿಸಿದ ಮೆಗಾಕಟ್ಟಡಗಳು – ಹೀಗೆ ಟೈಗರ್ ವುಡ್ಸ್ ಜೀವನವನ್ನು ಮನದಣಿಯೆ ಅನುಭವಿಸಿದ.



ಇಷ್ಟೆಲ್ಲ ಇದ್ದ ಮೇಲೆ ಪರಸ್ತ್ರೀ ಮೋಹ ಇಲ್ಲದಿದ್ದೀತೆ? ಮೊದಲು ಅಮೆರಿಕದ ಪ್ರತಿಷ್ಠಿತ ಬಾರ್ ಒಂದರ ಮ್ಯಾನೇಜರ್, 'ವುಡ್ಸ್ ನನ್ನ ಜತೆಗೆ ಹಾದರ ಮಾಡುತ್ತಿದ್ದಾನೆ' ಎಂದು ಘೋಷಿಸಿದಳು. ಅದರ ಬೆನ್ನಲ್ಲೇ ಒಬ್ಬೊಬ್ಬರಾಗಿ ಸೆಲೆಬ್ರಿಟಿ ವಲಯದ ಹತ್ತಾರು ಸುಂದರಿಯರು ತಮ್ಮ ಮತ್ತು ಟೈಗರ್ ನಡುವಣ ಪ್ರೇಮಕಥೆಗಳನ್ನು ಬಾಯಿಬಿಟ್ಟರು. ಟೈಗರ್‌ನ ಈ ಕಾಮಪುರಾಣ ಎಷ್ಟೊಂದು ದೊಡ್ಡ ಕೋಲಾಹಲ ಸೃಷ್ಟಿಸಿತೆಂದರೆ, ಆತನ ಹೆಂಡತಿ ಎಲಿನ್ ಮನೆಯಿಂದ ಹೊರದಬ್ಬಿದಳು, ಗಂಡ ಮಾಡಿದ ವಂಚನೆಗಾಗಿ ಕೋರ್ಟ್ ಮೆಟ್ಟಿಲು ಹತ್ತಿದಳು. ಟೈಗರ್‌ನ ರಸಿಕ ಕಥೆಗಳು ಟ್ಯಾಬ್ಲಾಯ್ಡ್‌ಗಳಿಗೆ ರಸಗವಳವಾಯಿತು. 2010ರ ಮಧ್ಯಭಾಗದಲ್ಲಿ ಟೈಗರ್ ವುಡ್ಸ್ 100 ದಶಲಕ್ಷ ಅಮೆರಿಕನ್ ಡಾಲರ್ ಪರಿಹಾರ ಕೊಟ್ಟು ಹೆಂಡತಿಯಿಂದ ಡೈವೋರ್ಸ್ ಪಡೆದ.

ಅಲ್ಲಿಂದೀಚೆಗೆ ದುರ್ದೈವ ಈತನನ್ನು ಇನ್ನಿಲ್ಲದಂತೆ ಕಾಡಿತು. ಎರಡು ಸಲ ಅಪಘಾತ ಮಾಡಿಕೊಂಡ. ಬೆನ್ನುನೋವಿಗೆ ಆಪರೇಷನ್ ಮಾಡಿಸಿಕೊಂಡ. ಗಾಲ್ಫ್ ಆಟ ಹಳ್ಳ ಹಿಡಿಯಿತು. ವಿಶ್ವದ ನಂಬರ್ ಒನ್ ಗಾಲ್ಫರ್ ಆಗಿದ್ದ ವುಡ್ಸ್ ರ‍್ಯಾಂಕಿಂಗ್ ಪಟ್ಟಿಯಲ್ಲಿ ಹೇಳಹೆಸರಿಲ್ಲದಂತೆ ಕೆಳಗಿಳಿದ.

ಆದರೆ ಟೈಗರ್ ಛಲವಾದಿ. ಕುಸಿದು ಬಿದ್ದಲ್ಲಿಂದ ಮತ್ತೆ ನಿಧಾನಕ್ಕೆ ಮೇಲೆದ್ದ. ಎರಡು ವರ್ಷಗಳ ಕಾಲ ಹಟಕ್ಕೆ ಬಿದ್ದಂತೆ ಅಭ್ಯಾಸ ನಡೆಸಿದ. 2013ರಲ್ಲಿ ಬ್ರಿಡ್ಜ್‌ಸ್ಟೋನ್‌ನ ವಿಶ್ವ ಗಾಲ್ಫ್ ಚಾಂಪಿಯನ್‌ಷಿಪ್‌ನಲ್ಲಿ ಗೆಲುವು ಸಾಧಿಸಿದ. ಆದರೆ ಮೊದಲು ಹತ್ತಿದ್ದ ವಿಶ್ವ ನಂಬರ್ ಒನ್ ಶಿಖರಕ್ಕೆ ಏರುವುದು ಅಷ್ಟು ಸುಲಭವಿರಲಿಲ್ಲ. ಅದಾಗಲೇ ಬೇರೆ ಆಟಗಾರರು ಅಲ್ಲಿ ಗುಂಪುಗೂಡಿದ್ದರು. ಐದು ವರ್ಷಗಳಿಂದ ಟೈಗರ್ ವಿಶ್ವಮಟ್ಟದ ಪ್ರಶಸ್ತಿ ಗೆಲ್ಲಲು ಮರಳಿ ಯತ್ನವ ನಡೆಸುತ್ತಲೇ ಇದ್ದ. ಈ ಮಧ್ಯೆ ಬೆನ್ನುನೋವಿಗೆಂದು ಸಾಲಾಗಿ ನಾಲ್ಕು ಆಪರೇಷನ್‌ಗಳಾದವು. ಎಲ್ಲರೂ ವುಡ್ಸ್ ಕಥೆ ಮುಗಿಯಿತೆಂದೇ ಲೆಕ್ಕ ಹಾಕಿದ್ದರು.

ಈ ಹಿನ್ನೆಲೆಯಲ್ಲಿ ಈಗ ಟೈಗರ್ ವುಡ್ಸ್ ಗೆದ್ದಿರುವ ಪ್ರಶಸ್ತಿ ಅತ್ಯಂತ ಮಹತ್ವದ್ದು. ವಿಶ್ವ ರ‍್ಯಾಂಕಿಂಗ್‌ನಲ್ಲಿ 1999ನೇ ರ‍್ಯಾಂಕ್‌ನಿಂದ 13ನೇ ರ‍್ಯಾಂಕಿಗೆ ಮರಳುವುದೆಂದರೆ ಅದು ಸುಲಭದ ಸಾಧನೆಯಲ್ಲ. ಹಾಗೆಂದೇ ಕಳೆದ ವಾರ ಆತ ಆಡಿದ ಫೆಡ್‌ಎಕ್ಸ್ ಕಪ್ ಫೈನಲ್ ನೋಡಲೂ ಅತ್ಯಧಿಕ ಜನ ಸೇರಿದ್ದರು. 2007ರ ಬಳಿಕ ಫೆಡ್‌ಎಕ್ಸ್ ಕಪ್ ಫೈನಲ್‌ಗೆ ಇಷ್ಟೊಂದು ಜನ ಸೇರಿದ್ದು ಇದೇ ಮೊದಲು! ಮೂರು ದಿನಗಳ ಟಿಕೆಟ್ ಮೂರೇ ನಿಮಿಷಗಳಲ್ಲಿ ಮಾರಾಟವಾಗಿ ದಾಖಲೆ ನಿರ್ಮಿಸಿತ್ತು. ಗಾಲ್ಫ್ ಮೈದಾನದಲ್ಲಿ ಸಾವಿರಾರು ಪ್ರೇಕ್ಷಕರ 'ಟೈಗರ್ ಟೈಗರ್' ಎಂಬ ಘೋಷಣೆಗಳು ಮತ್ತೆ ಮೊಳಗಿದವು.

ಕಳೆದ ಏಪ್ರಿಲ್‌ನಲ್ಲಿ ಸ್ಪೈನಲ್ ಫ್ಯೂಷನ್ ಸರ್ಜರಿಗೆ ಒಳಗಾದ ಬಳಿಕ ಟೈಗರ್ ತನ್ನ ಆಟದ ಸ್ವಿಂಗ್ ಬದಲಾಯಿಸಿಕೊಂಡಿದ್ದಾನೆ. ಹೊಸ ಸ್ವಿಂಗ್‌ಗೆ ಒಗ್ಗಿಕೊಳ್ಳಲು ಸ್ವಲ್ಪ ಸಮಯ ಹಿಡಿದಿದೆ. ಆದರೆ ಫೆಡ್‌ಎಕ್ಸ್ ಕಪ್ ಗೆದ್ದ ಬಳಿಕ ಆತ ತನ್ನ ಹಿಂದಿನ ಆಟದ ಲಯಕ್ಕೆ ಮರಳಿದ್ದಾನೆ, 42ರ ಹರೆಯದಲ್ಲಿ ಈಗ ಟೈಗರ್ (ಬರ್ತ್‌ಡೇ: ಡಿ.30. 1975) ಮತ್ತೊಮ್ಮೆ ವಿಶ್ವದ ನಂಬರ್ ಒನ್ ಆಟಗಾರ ಆಗಬಹುದು ಎಂಬ ನಿರೀಕ್ಷೆ ಹುಟ್ಟಿದೆ. ಹಾಗೆ ನೋಡಿದರೆ, ವಿಶ್ವದಲ್ಲಿ ಅತ್ಯಧಿಕ ವಿಶ್ವಮಟ್ಟದ ಗಾಲ್ಫ್ ಟೂರ್ನಿಗಳನ್ನು ಗೆದ್ದವರಲ್ಲಿ ಜಾಕ್ ನಿಕ್‌ಲಾಸ್ ಬಿಟ್ಟರೆ (18 ಪ್ರಶಸ್ತಿ) ಈ ಟೈಗರ್ ವುಡ್ (14 ಪ್ರಶಸ್ತಿ) ಮೊದಲನೆಯವನು. ಇನ್ನೊಬ್ಬ ಆಟಗಾರ ಈ ಸಾಧನೆಯ ಹತ್ತಿರಕ್ಕೆ ಸುಳಿಯುವುದೂ ಕಷ್ಟವಿದೆ.

ವೈಯಕ್ತಿಕ ತಾಪತ್ರಯಗಳಿಂದ ಟೈಗರ್ ಪಾತಾಳಕ್ಕೆ ಕುಸಿದಾಗ ಈತನ ಜಾಹೀರಾತುಗಳಿಗೆ ಮುಗಿಬಿದ್ದಿದ್ದ ಕಂಪನಿಗಳೆಲ್ಲ ಹಿಂದೆ ಸರಿದಿದ್ದವು. ಎಟಿ&ಟಿ, ಗ್ಯಾಟೊರೇಡ್, ಜಿಲ್ಲೆಟ್, ಗಾಲ್ಫ್ ಡೈಜೆಸ್ಟ್, ಟ್ಯಾಗ್ ಹೂವರ್ ಎಲ್ಲರೂ ಟೈಗರ್‌ನ ಕೈಬಿಟ್ಟರು. ಆದರೆ ನೈಕ್ ಮಾತ್ರ ಟೈಗರ್ ಜೊತೆ ಬಿಡಲಿಲ್ಲ. 1996ರಲ್ಲಿ ನೈಕ್ ಸಹಿ ಹಾಕಿರುವ 20 ಕೋಟಿ ಡಾಲರ್ ಒಪ್ಪಂದ ಈಗಲೂ ಮುಂದುವರಿದಿದೆ. ಟೈಗರ್ ಕೂಡಾ ವೈಭವೋಪೇತ ಜೀವನಶೈಲಿಯಿಂದ ಸ್ವಲ್ಪ ಈಚೆಗೆ ಕದಲಿದ್ದಾನೆ. ಪ್ರತಿದಿನವೂ ಸ್ವಂತ ಜೆಟ್ ವಿಮಾನದಲ್ಲಿ ಪಯಣಿಸುತ್ತಿದ್ದ ಟೈಗರ್, ಕಳೆದ ಹತ್ತು ವರ್ಷಗಳಲ್ಲಿ ಇದೇ ಮೊದಲ ಬಾರಿಗೆ ಲಾಸ್ ಏಂಜಲೀಸ್‌ನಿಂದ ದುಬೈಗೆ ಕಮರ್ಷಿಯಲ್ ವಿಮಾನದಲ್ಲಿ ಪಯಣಿಸಿದ್ದ! ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65